# ‘ನಂಬರ್ 4’ರ ಪಂಥ

2019ರ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ಕಣ ಸಿದ್ಧವಾಗುತ್ತಿದೆ. ಮೇ 30ರಂದು ಆರಂಭವಾಗಲಿರುವ ವಿಶ್ವಕಪ್ ಟೂರ್ನಿಗೆ ಭಾರತ ತಂಡದಲ್ಲಿ ಯಾರೆಲ್ಲ ಇರಬಹುದು? 1983 ಮತ್ತು 2011ರಲ್ಲಿ– ಎರಡು ಬಾರಿ ವಿಶ್ವಕಪ್ ಗೆದ್ದಿರುವ ನಮ್ಮ ತಂಡ ಈ ಸಲವೂ ಕಪ್ ಗೆಲ್ಲಬಹುದೆ.. ಎನ್ನುವುದೀಗ ಮಿಲಿಯನ್ ಡಾಲರ್ ಪ್ರಶ್ನೆ. ಆದರೆ ಅದಕ್ಕಿಂತಲೂ ದೊಡ್ಡದಾಗಿ ಈಗ ಕೇಳಿಬರುತ್ತಿರುವ ಪ್ರಶ್ನೆ– ತಂಡದಲ್ಲಿ ‘ನಂಬರ್ 4’ ಆಟಗಾರ ಯಾರು.. ಎನ್ನುವುದು! ಅದರಲ್ಲೂ, ರಿಷಬ್ ಪಂತ್ ನಂಬರ್ 4ನಲ್ಲಿ ಆಡಬೇಕೋ ಬೇಡವೊ ಎನ್ನುವ ಪ್ರಶ್ನೆ!

ವಿಶ್ವಕಪ್‌ನಲ್ಲಿ ಆಡಬಹುದಾದ 16 ಮಂದಿಯ ಅಂದಾಜನ್ನು ಆಯ್ಕೆ ಸಮಿತಿ ಈಗಾಗಲೆ ಮಾಡಿಯಾಗಿದೆ ಎನ್ನುವುದು ಒಂದು ಸುದ್ದಿ. ಸದ್ಯಕ್ಕೆ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಇನ್ನೂ 5 ಮಂದಿಯ ಆಯ್ಕೆ ಆಗಬಹುದು ಎನ್ನಲಾಗುತ್ತಿದೆ. ಎಲ್ಲರೂ – ರಿಷಬ್ ಪಂತ್ ತಂಡದಲ್ಲಿರುವುದು ಖಚಿತ– ಎನ್ನುತ್ತಿದ್ದಾರೆ. ಆದರೆ ರಿಷಬ್ ಪಂತ್ 4ನೇ ಆಟಗಾರನಾಗಿ ಆಯ್ಕೆ ಆಗದಿದ್ದರೆ ಆತನನ್ನು ಮೈದಾನಕ್ಕಿಳಿಯುವ ತಂಡದಿಂದ ಕೈಬಿಡುವ ಸಾಧ್ಯತೆ ಇದೆಯೆ?

50 ಓವರ್‌ಗಳ ಪಂದ್ಯದಲ್ಲಿ ನಂಬರ್ 3 ಮತ್ತು 4 ಅತ್ಯಂತ ಮಹತ್ವದ ಸ್ಥಾನಗಳು. ಈ ಕ್ರಮಾಂಕದಲ್ಲಿ ಆಡುವವರಿಗೆ ಹೊಣೆಗಾರಿಕೆ ಹೆಚ್ಚು. ಆರಂಭಿಕ ಆಟಗಾರರು ಬೇಗ ವಿಕೆಟ್ ಕೈಚೆಲ್ಲಿದರೆ, ಇವರು ನೆಲಕಚ್ಚಿ ನಿಂತು ರನ್ ವೇಗ ಹೆಚ್ಚಿಸಬೇಕು. ಆರಂಭಿಕ ಆಟಗಾರರು ಆಕ್ರಮಣಕಾರಿ ಆಟವಾಡಿ ಸಾಕಷ್ಟು ರನ್ ಸೇರಿಸಿದರೆ, 3–4 ಕ್ರಮಾಂಕದಲ್ಲಿ ಬಂದವರು ಆ ರನ್ ಸರಾಸರಿಯನ್ನು ಕಾಯ್ದುಕೊಂಡೇ ಹೊಡಿಬಡಿಯ ಆಟವಾಡಬೇಕು. ಸಂದರ್ಭಕ್ಕೆ ತಕ್ಕಂತೆ ಆಟವಾಡಬೇಕಾದ ಸಾಮರ್ಥ್ಯ ಇವರಿಗೆ ಇರಲೇಬೇಕು.

ಮಹೇಂದ್ರಸಿಂಗ್ ದೋನಿ ಹೀಗೆ ಸಂದರ್ಭಕ್ಕೆ ತಕ್ಕಂತೆ ಆಟವಾಡಬಲ್ಲ ಸಾಮರ್ಥ್ಯ ಉಳ್ಳವ. ಜಗತ್ತಿನ ಎಲ್ಲ ತಂಡಗಳ ಬೌಲರ್‌ಗಳ ಎದುರೂ ಆಟವಾಡಿದ ಅನುಭವವಿದೆ. 4ನೇ ಕ್ರಮಾಂಕಕ್ಕೆ ಗಟ್ಟಿಗನಾದ ಧೋನಿಯನ್ನು ಐದಕ್ಕೆ ತಳ್ಳಿ ರಿಷಬ್‌ನನ್ನು ಆ ಕ್ರಮಾಂಕದಲ್ಲಿ ಆಡಿಸಬೇಕು ಎನ್ನುವುದು ಕೆಲವರ ಅಂಬೋಣ. ಈ ಹಿಂದೆ ವಿಶ್ವಕಪ್ ಗೆದ್ದ ತಂಡದಲ್ಲಿದ್ದ ಕೆ.ಶ್ರೀಕಾಂತ್ ಪ್ರಕಾರ, ‘ರಿಷಬ್ 4ನೇ ಕ್ರಮಾಂಕಕ್ಕೆ ಅತ್ಯಂತ ಸೂಕ್ತ ಆಟಗಾರ.’ ಆಸ್ಟ್ರೇಲಿಯಾದ ಮಾಜಿ ನಾಯಕ



ರಿಕಿ ಪಾಂಟಿಂಗ್ ಕೂಡಾ ಹೇಳುವುದು ‘ರಿಷಬ್ 4ನೇ ಕ್ರಮಾಂಕದಲ್ಲಿ ಆಡಿದರೆ ಸೂಕ್ತ’ ಎಂದೇ. ಸದ್ಯ ಐಪಿಎಲ್ ನಲ್ಲಿ ರಿಷಬ್ ಆಡುತ್ತಿರುವ ಡೆಲ್ಲಿ ತಂಡದ ಕೋಚ್ ಆಗಿರುವ ಪಾಂಟಿಂಗ್, ರಿಷಬ್ ಆಟವನ್ನು ಸರಿಯಾಗಿ ನೋಡಿಯೇ ಈ ಅಂಶವನ್ನು ಗುರುತಿಸಿರಬಹುದು.

ಆದರೆ ಹಲವು ಹಿರಿಯರು ಈ 4ನೇ ಕ್ರಮಾಂಕದ ವಾದವನ್ನು ಒಪ್ಪುವುದಿಲ್ಲ. ‘ಆರಂಭದ ಏಳು ಆಟಗಾರರು ಯಾವುದೇ ಕ್ರಮಾಂಕದಲ್ಲಿ ಆಡಲು ಸಿದ್ಧರಿರಬೇಕು. ಆಯಾ ಪಂದ್ಯದ ಅಗತ್ಯಕ್ಕೆ ತಕ್ಕಂತೆ ಯಾರನ್ನು ಯಾವ ಕ್ರಮಾಂಕದಲ್ಲೂ ಆಡಿಸಬಹುದು’ ಎನ್ನುತ್ತಾರೆ ಕಪಿಲ್‌ದೇವ್. ಅವರು ಭಾರತಕ್ಕೆ ಮೊತ್ತ ಮೊದಲ ವಿಶ್ವಕಪ್ ಗೆದ್ದುಕೊಟ್ಟ ತಂಡದ ನಾಯಕ. ಭಾರತ ತಂಡದ ಇನ್ನೊಬ್ಬ ಮಾಜಿ ನಾಯಕ ಸೌರವ್ ಗಂಗೂಲಿಯವರ ಪ್ರಕಾರ, ‘ಭಾರತದ ವಿಶ್ವಕಪ್ ತಂಡದಲ್ಲಿ 4ನೇ ಕ್ರಮಾಂಕದ ಆಟಗಾರ ಯಾರು ಎನ್ನುವುದು ಇನ್ನೂ ನಿರ್ಧಾರ ಆಗಿಲ್ಲ. ಈಗ ನಡೆಯುತ್ತಿರುವ ಐಪಿಎಲ್‌ನಲ್ಲಿ ಕೆಲವರ ಆಟ ನೋಡಿಕೊಂಡು ಇದನ್ನು ನಿರ್ಧರಿಸಲಾಗುತ್ತದೆ.’

ರಿಷಬ್ ಪಂತ್ ಈವರೆಗಿನ ಸಾಧನೆಯನ್ನು ಗಮನಿಸಿದರೆ, ಆತ ‘ನಂಬರ್ 4’ ಸ್ಥಾನಕ್ಕೆ ಸೂಕ್ತ ಎಂದೇ ಅನ್ನಿಸುತ್ತದೆ. ಆದರೆ ಧೋನಿಯೇ ನಂಬರ್ 4ಕ್ಕೆ ಗಟ್ಟಿಯಾದರೆ ಪಂತ್ ನಂಬರ್ 7ಕ್ಕೆ ಹೋಗಬಹುದೆ? ವಿಶ್ವಕಪ್ ತಂಡದಲ್ಲಿ ಇಬ್ಬರು ವಿಕೆಟ್ ಕೀಪರ್‌ಗಳನ್ನು ಆಯ್ಕೆ ಮಾಡಬೇಕಾಗಿರುವುದರಿಂದ ಧೋನಿ ಜೊತೆಗೆ ರಿಷಬ್ ಪಂತ್ ಕೂಡಾ ಆಯ್ಕೆ ಆಗುವುದು ಖಚಿತ. ಆದರೆ ಅಂತಿಮವಾಗಿ ಕಣಕ್ಕಿಳಿಯುವ 11ರ ತಂಡದಲ್ಲಿ ಧೋನಿ ಇದ್ದರೆ ರಿಷಬ್ ಇರುತ್ತಾರೆಯೆ? ಇದು ಉತ್ತರಿಸಲು ಕಷ್ಟದ ಪ್ರಶ್ನೆ.

ಹೊಡಿಬಡಿಯ ಆಟಕ್ಕೆ ರಿಷಬ್ ಯಾವತ್ತೂ ಹೆಸರುವಾಸಿ. ಮುಂಬೈ ಇಂಡಿಯನ್ಸ್ ವಿರುದ್ಧ ಐಪಿಎಲ್‌ನಲ್ಲಿ ಇತ್ತೀಚೆಗೆ 27 ಎಸೆತಗಳಲ್ಲಿ 78 ರನ್ ಸೇರಿಸಿದ ಆತನ ವೇಗಕ್ಕೆ ಮನಸೋಲದವರಿಲ್ಲ. 2016ರಲ್ಲಿ 19ರ ಒಳಗಿನ ವಿಶ್ವಕಪ್ ತಂಡದಲ್ಲಿ ಸ್ಥಾನ ಪಡೆದ ರಿಷಬ್ ಆಗಲೇ 18 ಎಸೆತಗಳಲ್ಲಿ 50 ರನ್ ಹೊಡೆದು ವಿಶ್ವದಾಖಲೆ ಬರೆದವನು. 2018ರಲ್ಲಿ ಐಸಿಸಿ ಈತನನ್ನು ‘ವರ್ಷದ ಉದಯೋನ್ಮುಖ ಆಟಗಾರ’ ಎಂದು ಗುರುತಿಸಿ ಗೌರವಿಸಿತ್ತು. ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿ ಟೆಸ್ಟ್ ಪಂದ್ಯಗಳಲ್ಲಿ ಈತ ಗಳಿಸಿದ ಶತಕಗಳೂ ಆಯ್ಕೆದಾರರ ಮನಗೆದ್ದಿವೆ.

ಧೋನಿ ಮತ್ತು ರಿಷಬ್‌ನನ್ನು ಹೋಲಿಸಿ ಮಾತನಾಡುವುದು ಸರಿಯಲ್ಲ. ಧೋನಿಯ ಆಟವನ್ನು ಯಾರಿಗೂ ಹೋಲಿಸಲು ಸಾಧ್ಯವಿಲ್ಲ. ಧೋನಿ 3ರಿಂದ 7ನೇ ಕ್ರಮಾಂಕದವರೆಗೆ ಎಲ್ಲಿ ಆಟವಾಡಲು ಬಂದರೂ ತಂಡದ ಜಯಕ್ಕೆ ಅಗತ್ಯ ರನ್‌ಗಳನ್ನು ಸೇರಿಸಬಲ್ಲ ಸಮರ್ಥ. ರಿಷಬ್‌ನಲ್ಲಿ ಆ ತಾಳಿಕೆಯ ಸಾಮರ್ಥ್ಯ ಇದೆಯೆ? ಸೌರವ್ ಗಂಗೂಲಿ ಹೇಳಿದಂತೆ ಇದೀಗ ನಡೆಯುತ್ತಿರುವ ಐಪಿಎಲ್ ಪಂದ್ಯಗಳ ಸಾಧನೆಯನ್ನೇ ಗಮನಿಸಿ ಆಯ್ಕೆ ಮಾಡುವುದಾದರೆ ಪಂತ್ ದೌರ್ಬಲ್ಯಗಳು ಸಾಕಷ್ಟಿವೆ. ಗ್ಯಾಲರಿಯಲ್ಲಿರುವ ಪ್ರೇಕ್ಷಕರ ಹರ್ಷೋದ್ಗಾರದ ಸಲುವಾಗಿ ಆಟವಾಡುವುದರ ಬದಲು ತಂಡದ ಜಯಕ್ಕೆ ತಕ್ಕಂತೆ ಆಟವಾಡುವುದು ಮುಖ್ಯ ಎನ್ನುವುದನ್ನು ಪಂತ್ ಅರ್ಥ ಮಾಡಿಕೊಳ್ಳಬೇಕಿದೆ. ಹೀಗೆಂದಾಕ್ಷಣ ಇನ್ನೊಂದು ಅಪಾಯವೂ ಇದೆ. 'ಪಂತ್ ತರಹದ ಆಟಗಾರರು ತಮ್ಮ ಎಂದಿನ ಆಕ್ರಮಣದ ಪ್ರವೃತ್ತಿಯನ್ನು ತ್ಯಜಿಸಬೇಕೆ?’ ಎನ್ನುವ ಪ್ರಶ್ನೆ ಏಳುತ್ತದೆ. ಹಾಗೆ ಹೇಳುವುದೂ ಕಷ್ಟ. ಈ ಹಿನ್ನೆಲೆಯಲ್ಲೇ ದೋನಿಯನ್ನು ನೋಡಿ ಪಂತ್ ಕಲಿಯಬೇಕಾದ ಹಲವು ಸಂಗತಿಗಳಿವೆ. ಇನ್ನೂ 21ರ ಹರೆಯದ ರಿಷಬ್ ಪಂತ್, ಎದುರಿಗಿರುವ ಅಡ್ಡಿಗಳೂ ಸಾಕಷ್ಟಿವೆ. ಹಾರ್ದಿಕ್ ಪಾಂಡ್ಯ ಅಥವಾ ರವೀಂದ್ರ ಜಡೇಜಾ ಅಂತಿಮ 11ರಲ್ಲಿ ಸ್ಥಾನ ಪಡೆದರೆ ರಿಷಬ್ ಪೆವಿಲಿಯನ್‌ನಲ್ಲೇ ಕೂರಬೇಕಾಗಬಹುದು.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65